O.S. 208/2013
ಪಿ ಡಬ್ಲೂ 3

**<u>ಸಾಕ್ಷಿಯನ್ನು ದಿನಾಂಕಃ 30-08-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀ ಸವಾಲು 3 ನೇ ಪ್ರತಿವಾದಿ ಪರ ವಕೀಲರವರಿಂದಃ</u>**

ನಾನು ಶಾಲೆ ಕಲಿತಿರುವುದಿಲ್ಲ. ನನಗೆ ವಾದಿ ಮತ್ತು ಆತನ ಹೆಂಡತಿ ಹಾಗೂ ಮಕ್ಕಳು ಮತ್ತು ಪ್ರತಿವಾದಿಗಳು ಪರಿಚಯ ಇರುವರು ಎಂದು ನಾನು ಮುಖ್ಯವಿಚಾರಣೆಯಲ್ಲಿ ಹೇಳಿದ ವಿಚಾರ ಸರಿಯಾಗಿರುತ್ತದೆ. ಅಂಜಿನಪ್ಪನಿಗೆ ಒಬ್ಬರು ಪತ್ನಿ ಇದ್ದ ವಿಚಾರ ಮಾತ್ರ ಗೊತ್ತಿರುವುದು. ಅವರಿಗೆ ಮೊದಲನೇ ಪತ್ನಿ ಇದ್ದ ವಿಚಾರ ಗೊತ್ತಿಲ್ಲ. ಅವರ ಮೊದಲ ಪತ್ನಿ ಮಂಜವ್ವ ಎಂಬಾಕೆ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಮೂಲತಃ ದಾವಾ ಸ್ವತ್ತು ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ನನಗೆ ವಾದಿಯ ಪೂರ್ವಿಕರ ಹೆಸರುಗಳು ಗೊತ್ತಿರುವುದಿಲ್ಲ. ನನಗೆ 3 ನೇ ಪ್ರತಿವಾದಿಯ ಪರಿಯವಿರುವುದಿಲ್ಲ. ನನಗೆ ದಾವಾ ಆಸ್ತಿಯ ಕುರಿತು 3 ನೇ ಪ್ರತಿವಾದಿ ಮಾಡಿದ ವ್ಯವಹಾರದ ಕುರಿತು ಮಾಹಿತಿ ಇರುವುದಿಲ್ಲ.

3 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಖರೀದಿ ಮಾಡಿದ್ದು ಈಗಲೂ ದಾಖಲೆಗಳು ಅತನ ಹೆಸರಿನಲ್ಲಿವೆ ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ದಾವಾ ಆಸ್ತಿಯ ಸ್ವಾಧೀನದಲ್ಲಿಕೊಂಡು ಈಗಲೂ ಕರಪಾವತಿ ಮಾಡುತ್ತಿರುವರು ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯ ಸ್ವಾಧೀನದ ವಿಚಾರ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅಕ್ರಮ ಪ್ರವೇಣ ಮಾಡಿದ ದಿನಾಂಕ ಹೇಳಲಾಗುವುದಿಲ್ಲ. ಪ್ರತಿವಾದಿಗಳು ಯಾವುದೇ ಅತಿಕ್ರಮ ಪ್ರವೇಶ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

30.08.2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**